# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 179 |
| 2. | ಮಾನ್ಯ ಸದಸ್ಯರ ಹೆಸರು | ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3. | ಉತ್ತರಿಸಬೇಕಾದ ದಿನಾಂಕ | 13/09/2021 |
| 4. | ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೊರೋನಾ ಸಮಯದಲ್ಲಿ ಕಾರ್ಮಿಕರಿಗೆ ಸರಿಯಾದ ರೀತಿಯಲ್ಲಿ ಆಹಾರದ ಕಿಟ್‌ಗಳು ದೊರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕೋವಿಡ್-19ರ 2ನೇ ಅಲೆಯಲ್ಲಿ ಸಂಕಷ್ಟಕ್ಕೆ ಒಳಗಾದ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಹಾಗೂ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಿಂದ ಆಹಾರ ಸಾಮಾಗ್ರಿಗಳ ಕಿಟ್‌ಗಳನ್ನು ಕಾರ್ಮಿಕ ಇಲಾಖೆಯ ಕ್ಷೇತ್ರ ಮಟ್ಟದ ಅಧಿಕಾರಿಗಳ ಮೂಲಕ ವಿತರಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ. ಆಹಾರದ ಕಿಟ್‌ಗಳನ್ನು ವಿತರಿಸುವ ಬಗ್ಗೆ ಮಂಡಳಿಯಿಂದ Standard operating procedure ಅನ್ನು ಅಧಿಕಾರಿಗಳಿಗೆ ಒದಗಿಸಲಾಗಿದ್ದು ಸದರಿ Standard operating procedure ಅನ್ವಯ ಅಧಿಕಾರಿಗಳು ಜನಪ್ರತಿನಿಧಿಗಳು, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ಸದಸ್ಯರು ಹಾಗೂ ಕಾರ್ಮಿಕ ಸಂಘಗಳ ಪದಾಧಿಕಾರಿಗಳ ಸಮ್ಮುಖದಲ್ಲಿ ಮತ್ತು ಸಹಯೋಗದೊಂದಿಗೆ ವಿತರಿಸಲು ಕ್ರಮಕೈಗೊಳ್ಳಲಾಗಿರುತ್ತದೆ. |
| ಆ) | ಕಾರ್ಮಿಕರಿಗೆ ಈಗಾಗಲೇ ನೀಡಿರುವ ಆಹಾರ ಕಿಟ್‌ಗಳಲ್ಲಿ ಹುಳ ಹಿಡಿದ ಬೇಳೆ, ಮುಗ್ಗಲು ಕಟ್ಟಿರುವ ಅಕ್ಕಿ ಹಾಗೂ ಆಹಾರ ಕಿಟ್‌ಗಳಲ್ಲಿ ಅಕ್ಕಿಯಿದ್ದರೆ ಬೇಳೆ ಇಲ್ಲ, ಬೇಳೆ ಇದ್ದರೆ, ಅಡುಗೆಎಣ್ಣೆ ಇಲ್ಲ ಎಂಬ ಸಮಸ್ಯೆಗಳು ಕಂಡುಬರುತ್ತಿವೆ ಎಂದು ಅನೇಕ ಸಾರ್ವಜನಿಕರು ಅಳಲು ವ್ಯಕ್ತಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೋಂದಾಯಿತರಾದ ಕಾರ್ಮಿಕರಿಗೆ ಸರ್ಕಾರದ ಆದೇಶದಂತೆ ನಿರ್ದಿಷ್ಟ ಪಡಿಸಿದ ಪದಾರ್ಥಗಳ ಕಿಟ್‌ಗಳಿಗೆ ನಿಗಧಿಪಡಿಸಿದ ಪ್ರಮಾಣದಲ್ಲಿ ಒಳಪಡಿಸಿ ಕಿಟ್‌ಗಳನ್ನು ಸಿದ್ದಪಡಿಸಿ ಸರಬರಾಜು ಮಾಡಲು ಪೂರೈಕೆದಾರರಿಗೆ ಪೂರೈಕೆ ಆದೇಶವನ್ನು ನೀಡಲಾಗಿದ್ದು ಸದರಿ ಪೂರೈಕೆ ಆದೇಶದನ್ವಯ ಸರಬರಾಜುದಾರರು ಆಹಾರದ ಕಿಟ್‌ಗಳನ್ನು ಸಿದ್ದಪಡಿಸಿ ಇಲಾಖೆ ಅಧಿಕಾರಿಗಳಿಗೆ ಒದಗಿಸಿರುತ್ತಾರೆ. ಈ ರೀತಿ ಪೂರೈಕೆ ಆದೇಶ ಪಡೆದ ಸಂಸ್ಥೆಗಳ ಪೈಕಿ ಒಂದು ಸಂಸ್ಥೆಯು 300 ಆಹಾರ ಕಿಟ್‌ಗಳಲ್ಲಿ ಕಳಪೆ ಮಟ್ಟದ ತೊಗರಿಬೇಳೆ ಸರಬರಾಜು ಮಾಡಿರುವ ದೂರುಗಳು ಮಂಡಳಿಗೆ ಬಂದಿದ್ದು ಸದರಿ ಸರಬರಾಜುದಾರರಿಗೆ ಕಾರಣ ಕೇಳುವ ಸೂಚನಾ ಪತ್ರವನ್ನು ಜಾರಿ ಮಾಡಲಾಗಿರುತ್ತದೆ ಹಾಗೂ ಇಲಾಖೆಯ ಅಧಿಕಾರಿಗಳಿಂದ |

| | | |
|---|---|---|
| | | ತನಿಖೆಗೆ ಒಳಪಡಿಸಲಾಗಿರುತ್ತದೆ. ತನಿಖಾಧಿಕಾರಿಗಳು ನೀಡಿದ ವರದಿಯನ್ವಯ ಸದರಿ ಪೂರೈಕೆ ಸಂಸ್ಥೆಯು 350 ಕೆಜಿ ಕಳಪೆ ತೊಗರಿಬೇಳೆಯನ್ನು ಸರಬರಾಜು ಮಾಡಿದ ಬಾಬ್ತು ರೂ.47,950/- ಗಳನ್ನು ಪಾವತಿ ಮಾಡಬೇಕಾದ ಮೊತ್ತದಲ್ಲಿ ಕಠಾವು ಮಾಡಲಾಗಿರುತ್ತದೆ. ಸದರಿ ಸಂಸ್ಥೆಗೆ ಎಚ್ಚರಿಕೆ ಪತ್ರವನ್ನು ನೀಡಲಾಗಿರುತ್ತದೆ. ಹಾಗೂ ಅಕ್ಕಿಯನ್ನು ಸರ್ಕಾರದ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಿಂದ ಸರ್ಕಾರ ನಿಗದಿ ಪಡಿಸಿದ ದರದಲ್ಲಿ ಉತ್ತಮ ಗುಣಮಟ್ಟದ ಅಕ್ಕಿಯನ್ನು ಎತ್ತುವಳಿ ಮಾಡಲಾಗಿರುತ್ತದೆ. |
| ಇ) | ಕಳಪೆ ಆಹಾರ ಕಿಟ್ ನೀಡಿ ತಲಾ ಒಂದು ಕಿಟ್‌ಗೆ ರೂ. 300 ರಂತೆ ಕಮೀಷನ್ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಕಳಪೆ ಆಹಾರ ಕಿಟ್‌ನಲ್ಲಿ ಕಮಿಷನ್ ಪಡೆದ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ? (ಸಂಪೂರ್ಣ ಮಾಹಿತಿ ನೀಡುವುದು) | ಅಧಿಕಾರಿಗಳು ಕಳಪೆ ಆಹಾರ ಕಿಟ್ ನೀಡಿ ತಲಾ ಒಂದು ಕಿಟ್‌ಗೆ ರೂ. 300 ರಂತೆ ಕಮೀಷನ್ ಪಡೆದಿರುವ ಬಗ್ಗೆ ಮಂಡಳಿಗೆ ಯಾವುದೇ ದೂರು / ವರದಿಗಳು ಬಂದಿರುವುದಿಲ್ಲ. |

**ಕಾಇ 346 ಎಲ್‌ಇಟಿ 2021**

(*ಅರಬೈಲ್ ಶಿವರಾಂ ಹೆಬ್ಬಾರ್*)
**ಕಾರ್ಮಿಕ ಸಚಿವರು**